# ಜಿಯೊ ನೆಕ್ಸ್ಟ್‌ಗೆ ಪ್ರಗತಿ ಒಎಸ್!

**ಶಶಿಕುಮಾರ್ ಸಿ.**



ಒಂದಿಲ್ಲೊಂದು ಸುದ್ದಿಯಿಂದಲೇ ಸದಾ ಸದ್ದಲ್ಲಿರುವ ಜಿಯೊ ಈ ಬಾರಿ ಸುದ್ದಿಯಲ್ಲಿರುವುದು ಜಿಯೊ ನೆಕ್ಸ್ಟ್ ಫೋನ್‌ನಿಂದಾಗಿ. ಬರೀ ಫೋನ್‌ನಿಂದಷ್ಟೇ ಅಲ್ಲ ಅದರ 'ಒಎಸ್'ನಿಂದಲೂ (ಆಪರೇಟಿಂಗ್ ಸಿಸ್ಟಂ).

ಮಧ್ಯಮ ವರ್ಗದವರ ಕೈಗೆಟುಕುವ ದರದಲ್ಲಿ ಸ್ಮಾರ್ಟ್‌ಫೋನ್‌ಗಳನ್ನು ಬಿಡುಗಡೆ ಮಾಡುವ ಸಿದ್ಧತೆ ನಡೆಸಿದ್ದ ಜಿಯೊ, ಅಂತಿಮ ಹಂತವಾಗಿ 'ಜಿಯೊ ನೆಕ್ಸ್ಟ್' ಮೊಬೈಲ್ ಅನ್ನು ಬಿಡುಗಡೆ ಮಾಡಿದೆ. ಅದು 'ಪ್ರಗತಿ ಒಎಸ್' (ಆಪರೇಟಿಂಗ್ ಸಿಸ್ಟಂ – ಕಾರ್ಯಾಚರಣಾ ವ್ಯವಸ್ಥೆ) ಎಂಬ ಹೊಸ ಆಪರೇಟಿಂಗ್ ಸಿಸ್ಟಂ ತಂತ್ರಾಂಶವನ್ನು ಹೊಂದಿರುವುದು ವಿಶೇಷವೆನಿಸಿದೆ.

ಭಾರತದ ಅತಿದೊಡ್ಡ ಟೆಲಿಕಾಂ ಕಂಪನಿಗಳಲ್ಲಿ ಒಂದಾಗಿರುವ ರಿಲಯನ್ಸ್ ಜಿಯೊ ಗೂಗಲ್‌ನೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಅದರಂತೆ 'ಜಿಯೊ ಫೋನ್ ನೆಕ್ಸ್ಟ್' ಅನ್ನು 'ಪ್ರಗತಿ ಒಎಸ್' ಆಪರೇಟ್ ಮಾಡಲಿದೆಯಂತೆ. ವಾಸ್ತವವಾಗಿ 'ಪ್ರಗತಿ ಒಎಸ್' ಬಗ್ಗೆ ತಿಳಿಯುವುದಾದರೆ ಇದೊಂದು ಆಂಡ್ರಾಯ್ಡ್ ಆಪರೇಷನ್ ಮೇಲೆ ಆಧಾರಗೊಂಡಿರುವ ಸಾಫ್ಟ್‌ವೇರ್. ಗೂಗಲ್‌ನ ಆಂಡ್ರಾಯ್ಡ್ ಒಎಸ್ ಬೆಂಬಲದೊಂದಿಗೆ ಕಾರ್ಯ ನಿರ್ವಹಿಸುವುದು.

ರಿಲಯನ್ಸ್ ಜಿಯೊ 'ಜಿಯೊ ಫೋನ್ ನೆಕ್ಸ್ಟ್'ಗಾಗಿ ಆಂಡ್ರಾಯ್ಡ್ ಗೋ ಪರಿಸರ ವ್ಯವಸ್ಥೆಯನ್ನು ನಿಯಂತ್ರಿಸಲು ಬಯಸಿತ್ತು. 'ಪ್ರಗತಿ ಒಎಸ್', ಆಂಡ್ರಾಯ್ಡ್ ಗೋ ಆಪರೇಟಿಂಗ್ ಸಿಸ್ಟಂನ ಮೇಲಿರುವ ಸಾಫ್ಟ್‌ವೇರ್ ಸ್ಕಿನ್ ಆಗಿದೆ. ಆಂಡ್ರಾಯ್ಡ್ ಎನ್ನವುದು ಆಂಡ್ರಾಯ್ಡ್‌ನ ಸ್ಟ್ರಿಪ್ಡ್ ಡೌನ್ ಆವೃತ್ತಿಯಾಗಿದ್ದು, ಅದು ಸೀಮಿತ ಹಾರ್ಡ್‌ವೇರ್ ಸಾಮರ್ಥ್ಯಗಳೊಂದಿಗೆ ಕಡಿಮೆಬೆಲೆಯ ಫೋನ್‌ಗಳನ್ನು ಬೆಂಬಲಿಸಲು ಉದ್ದೇಶಿಸಲಾಗಿದೆ.

'ಜಿಯೊ ನೆಕ್ಸ್ಟ್' ಕ್ವಾಲ್ಕಾಮ್ 215 ಪ್ಲಾಟ್‌ಫಾರ್ಮ್‌ನಿಂದ ಇನ್ನಷ್ಟು ಕ್ರಿಯಾಶೀಲಗೊಳ್ಳುವ ನಿರೀಕ್ಷೆಯನ್ನು ಹೊಂದಿದ್ದು, ಈ ಪ್ಲಾಟ್‌ಫಾರ್ಮ್ ಅನ್ನು 2 ಜಿಬಿ ರ್‍ಯಾಮ್ ಮತ್ತು 32ಜಿಬಿ ಆಂತರಿಕ ಸ್ಟೋರೇಜ್‌ಗಿಂತ ಕಡಿಮೆ ಸಾಮರ್ಥ್ಯದ ಸ್ಮಾರ್ಟ್‌ಫೋನ್‌ಗಳಿಗಾಗಿ ನಿರ್ಮಿಸಲಾಗಿದೆ.

ಗೂಗಲ್ ಅಸಿಸ್ಟೆಂಟ್‌ಗೆ ಹೋಲುವ ಧ್ವನಿ ಸಹಾಯಕ ಇದರಲ್ಲಿ ಇರುವುದನ್ನು ರಿಲಯನ್ಸ್ ಜಿಯೊ ದೃಢಪಡಿಸಿದೆ. ಅದರೊಟ್ಟಿಗೆ 'ಜೋರಾಗಿ ಓದುವ' ವೈಶಿಷ್ಟ್ಯತೆಯನ್ನು ಇದು ಹೊಂದಿದ್ದು, ಆನ್ ಸ್ಕ್ರೀನ್ ವಿಷಯಗಳನ್ನು ಓದಲು ನೆರವಾಗುತ್ತದಲ್ಲದೆ, 10 ಭಾರತೀಯ ಭಾಷೆಗಳನ್ನು ಅನುವಾದಿಸುವ ಫೀಚರ್ ಸಹ ಹೊಂದಿದೆ.

ಅದಲ್ಲದೆ, ಗೂಗಲ್ ಅಪ್ಲಿಕೇಶನ್ ಮತ್ತು ಸಮಯೋಚಿತವಾಗಿ ಸಾಫ್ಟ್‌ವೇರ್ ನವೀಕರಣಗಳಿಗೂ ಈ ಒಎಸ್ ಸ್ಪಂದಿಸುವ ಮೂಲಕ ಬೆಂಬಲ ವ್ಯಕ್ತಪಡಿಸುತ್ತದೆ. 'ಜಿಯೊ ಫೋನ್ ನೆಕ್ಸ್ಟ್'ನಲ್ಲಿ ಗೂಗಲ್‌ನ ಎಲ್ಲ ಸೇವಾ ತಂತ್ರಾಂಶಗಳು (ಜಿಮೇಲ್, ಮ್ಯಾಪ್ಸ್, ಡ್ರೈವ್ ಇತ್ಯಾದಿ) ಲಭ್ಯ.




॥ ಶ್ರೀ ಗುರು ಓಂ ಶ್ರೀ ಸಾಯಿರಾಂ ॥

Indian Famous Astrologer

ಬಿಳಿಗಿರಿ ರಂಗನ ಬೆಟ್ಟದಿಂದ ನೇರ ಪರಿಹಾರ



ಓಂ ಶ್ರೀ ಸಾಯಿ ಕೊಡಂಗಲ್ಲೂರು ಭಗವತಿ ಜ್ಯೋತಿಷ್ಯರು

ಕೇರಳದ ಮಹಾಜ್ಞಾನಿ ದೈವಜ್ಞ

ಪಂ॥ ಬಿ. ಗುರುಪ್ರಸಾದ್

ಮಾತಾ ಕಾಳಿಕಾದೇವಿ ಆರಾಧಕರು

ಕೇರಳದ ಅಷ್ಟಮಂಗಲ ಪ್ರಶ್ನೆ, ಆರೋಢ ಪ್ರಶ್ನೆ, ತಾಂಬೂಲ ಪ್ರಶ್ನೆ, ದೈವ ಪ್ರಶ್ನೆ, ಕವಡೆ ಪ್ರಶ್ನೆ, ಮುಖಲಕ್ಷಣ, ಜನ್ಮದಿನಾಂಕ ನೋಡಿ ಸಂಪೂರ್ಣ ಭವಿಷ್ಯವನ್ನು ಫೋನಿನ ಮೂಲಕ ತಿಳಿಸುತ್ತಾರೆ.

ನಿಮ್ಮ ಸಮಸ್ಯೆಗಳಾದ ವಿದ್ಯೆ, ಮದುವೆ, ವಿದೇಶ ಪ್ರಯಣ, ಆರೋಗ್ಯ, ಸಂತಾನ, ಮಾಟ-ಮಂತ್ರ, ಶತ್ರುನಾಶ, ಸ್ತ್ರೀ-ಪುರುಷ ವಶೀಕರಣ, ಕೋರ್ಟ್ ಕೇಸ್ ವ್ಯಾಪಾರದಲ್ಲಿ ತೊಂದರೆ ಇನ್ನಿತರ ಗುಪ್ತ ಕಠಿಣ ಸಮಸ್ಯೆಗಳಿಗೆ ಕೇರಳದ ಶ್ರೀ ಆದಿ ದೈವಗಳಾದ, ಕೊಡಂಗಲ್ಲೂರು ಭಗವತಿ, ಮಾಂಡಂಗಾವ್ ಭಗವತಿ, ಚೋಟಾನಿಕರೆ ಭಗವತಿ, ಕಣತ್ತೂರ್ ನಾಲ್ವಾರ್ ದೈವಂ, ಶ್ರೀ ವಿಷ್ಣುಮಾಯೆ ಕುಟ್ಟಿ ಚಾತನ್ ತಪೋ ಶಕ್ತಿಯಿಂದ 3 ದಿನಗಳಲ್ಲಿ ಶಾಶ್ವತ ಪರಿಹಾರ ಮಾಡುತ್ತಾರೆ.

Get your Any Problem 100% Solutions wit in 3 Days

ಯಾವುದೇ ಹಳ್ಳಿ, ತಾಲ್ಲೂಕು, ಜಿಲ್ಲೆಗಳಿಂದ ಕರೆ ಮಾಡಿದರೆ ಫೋನಿನ ಮುಖಾಂತರ ಪರಿಹಾರ ತಿಳಿಸುತ್ತಾರೆ.

ವಿ.ಸೂ: ನಮ್ಮನ್ನು ಬಿಟ್ಟು ಬೇರೆ ಯಾರಾದರೂ ಪರಿಹಾರ ಮಾಡಿಕೊಟ್ಟಲ್ಲಿ ಅವರಿಗೆ ಸೂಕ್ತ ಬಹುಮಾನ ಕೊಡಲಾಗುವುದು.

ಬೆಂಗಳೂರಿನಲ್ಲಿ ಲಭ್ಯವಿರುತ್ತಾರೆ

ನಿಮ್ಮ ಯಾವುದೇ ಸಮಸ್ಯೆ ಇದ್ದರು ಗುಪ್ತವಾಗಿ ಇಡಲಾಗುವುದು.

9972851544